

ಎಷ್ಟೋ ಸಲ ಅವನನ್ನು ಸಾಯಿಸಿಬಿಡಬೇಕೆಂಬಷ್ಟು ಸಿಟ್ಟು ಬರುತ್ತಿತ್ತು. ಇರಲಿ, ಇವತ್ತು ಇದಕ್ಕೊಂದು ಗತಿ ಕಾಣಿಸದೆ ಬಿಡಬಾರದು. ಹೇಗಾದರೂ ಈ ರಾತ್ರಿ ಮುಗಿದರೆ ಸಾಕು. ಅಮ್ಮನ ಮುಂದೆಯೇ ಹಲಾಲ್ ಮಾಡಿ ನನ್ನ ನಾಲಿಗೆಯಿಂದ ಮನಸಾರೆ ತಿವಿತಿವಿದು ಸಾಯಿಸುವೆ.

ಕತ್ತಲು ಮತ್ತಷ್ಟು ಬಲಿತಿತ್ತು. ಹಸಿವಾಗತೊಡಗಿತು. ಸಂತೈಸುವ ಆಹ್ಲಾದಕರ ಗಾಳಿ ಈಗ ನಿಧಾನವಾಗಿ ಕಿವಿ ಕೊರೆಯುತ್ತ ನೋವುಂಟು ಮಾಡುತ್ತಿತ್ತು. ಸಮಯ ಹತ್ತಾಗಿರಬಹುದು. ಆತನ ಪ್ರಹರಗಳ ಲೆಕ್ಕ ಹಾಳಾಗಿ ಹೋಗಲಿ. ನಮ್ಮ ಲೋಕರೂಢಿ ಪ್ರಕಾರ ಹನ್ನೆರಡು ದಾಟಿ ಅರ್ಧ ಸೆಕೆಂಡಾದರೂ ಇವತ್ತೆಂಬುದು ಪೂರ್ತಿ ಮುಗಿದಂತೆ. ಅಲ್ಲಿವರೆಗೆ ಹುಗ್ಗಿ ತಿನ್ನದೆ ಇದ್ದರಾಯ್ತು, ನಾನು ಗೆದ್ದಂತೆಯೇ. ಹಾಗೂ ಹೀಗೂ ಇನ್ನೆರಡು ತಾಸು ಕಳೆದರಾಯಿತು ಎಂದುಕೊಳ್ಳುತ್ತಿರುವಾಗಲೇ ಮನದಲ್ಲಿ ಮೂಡಿದ್ದು—ಈ ಎರಡು ತಾಸನ್ನು ನಿದ್ದೆ ಮಾಡಿಯೂ ಕಳೆಯಬಹುದಲ್ಲವೆ? ಕಣ್ಣಿಗೆ ಎಣ್ಣೆ ಬಿಟ್ಟುಕೊಂಡೇ ಈ ಸಮಯವನ್ನು ಗೆಲ್ಲಬೇಕೆಂದೇನಿಲ್ಲವಲ್ಲ—ಎಂಬ ಆಲೋಚನೆ. ಅಂತೂ ಮಾವಿನ ಮರದ ಕೆಳಗೆ ತಡವಾಗಿಯಾದರೂ ಜ್ಞಾನೋದಯವಾಯಿತು ಎಂದುಕೊಳ್ಳುತ್ತ ಜೋಡಿ ಸಮಾಧಿ ಕಟ್ಟೆ ಮೇಲೆ ಅಡ್ಡಾದೆ.

ಬಂದದ್ದೆಲ್ಲ ಬರೀ ಆಲೋಚನೆಗಳೇ.

ಈ ಅಡವಿಗೇನೋ ಬಂದೆ. ಇಲ್ಲಿಗಾದರೂ ಯಾರೂ ಬರಲಾರರು ಎಂದು ಹೇಗೆ ಹೇಳುವುದು? ಮನುಷ್ಯರು ಬಂದರೆ ಸರಿ; ಹಾವು—ಚೇಳುಗಳು ಬಂದರೆ? ಕ್ರೂರ ಮೃಗಗಳು ಬಂದರೆ? ದೆವ್ವ ಭೂತಗಳು ಬಂದರೆ? ಇಂಥವೇ ಇನ್ನೂ ನೂರಾರು ಭಯ ಹುಟ್ಟಿಸುವ ಆಲೋಚನೆಗಳು. ಅಲೋಚನೆಗಳು ತೆರೆ ಮರೆಗೆ ಸರಿದು ಯಾವಾಗ ನಿದ್ದೆ ಆವರಿಸಿಕೊಂಡಿತೋ...

ದೂರದಲ್ಲಿ ನಾಲ್ಕಾರು ಜನ ಮಾತಾಡಿಕೊಳ್ಳುತ್ತ ಸರಪರ ಸದ್ದು ಮಾಡುತ್ತ ಮಾವಿನ ಮರದ ಕಡೆಗೇ ಬರುತ್ತಿರುವಂತೆ ಭಾಸವಾಗಿ ನಿದ್ದೆಯಿಂದೆದ್ದು ನಿಧಾನವಾಗಿ ಅರೆನಿದ್ದೆ—ಅರೆಎಚ್ಚರದಂಥ ಸ್ಥಿತಿಗೆ ತಲುಪಿದೆ. ಸದ್ದು ಸ್ಪಷ್ಟವಾಗತೊಡಗಿದ್ದೇ ನಿದ್ದೆ ಸಂಪೂರ್ಣ ಹಾರಿಹೋಯಿತು. ಕಣ್ಣನ್ನು ಉಜ್ಜಿಕೊಂಡು, ಕಿರಿದುಗೊಳಿಸಿ ಕುಳಿತಲ್ಲಿಂದಲೇ ನೋಡಿದೆ. ಕಪ್ಪು ಆಕೃತಿಗಳು ನಡೆದುಬರುತ್ತಿದ್ದುದು ನಿಜವಿತ್ತು. ಯಾರಾದರೂ ತಾಂತ್ರಿಕರಿರಬಹುದೆ? ಸೈಕಲ್ ತಾತ ಹೇಳುವಂತೆ ಕಾಳಿ ಅಧಿದೇವತೆಯಾಗಿರುವ ಪ್ರಹರ ಶುರುವಾಗಿದೆ. ತಂತ್ರ ಮಂತ್ರ, ಮೋಹಿನೀ, ಸಮ್ಮೋಹಿನೀ, ವಶೀಕರಣ, ಗುಪ್ತನಿಧಿ ಶೋಧನ, ಬಲಿತರ್ಪಣ ಯಾವ ಕಾರ್ಯ ಹಿಡಿದು ಬಂದಿರುವರೋ? ದೇವರೇ ಇದೆಂಥಾ ಕೆಲಸ ಮಾಡಿದೆ ನಾನು? ಒಂದು ಅರ್ಥಹೀನ ಜಿದ್ದಿನ ಸಾಧನೆಗಾಗಿ ಪ್ರಾಣ ಪಣಕ್ಕಿಟ್ಟುಕೊಂಡಂಥ ಹೆಡ್ಡನ ಕೆಲಸ ಮಾಡಿಬಿಟ್ಟೆನಲ್ಲ?

ಸರಸರನೆ ಮಾವಿನ ಮರವೇರಿದವನೇ ಪ್ರಾಣ ಕೈಯಲ್ಲಿ ಹಿಡಿದುಕೊಂಡು, ಉಸಿರು ಬಿಗಿಹಿಡಿದುಕೊಂಡು, ಬಿಟ್ಟಕಣ್ಣು ಬಿಟ್ಟಂತೆ ರೆಪ್ಪೆಯನ್ನೂ ಅಲುಗಿಸದೆ ನೋಡುತ್ತ ಕುಳಿತುಬಿಟ್ಟೆ.

## 6

ಆ ನಾಲ್ವರು ನಿಧಾನವಾಗಿ ಮಾವಿನ ಮರದ ಕೆಳಗೇ ಬಂದರು.

ಏನೋ ಮಾಡಲು ಹೋಗಿ ಏನೋ ಮಾಡಿಕೊಂಡಂತಾಗಿತ್ತು ನನ್ನ ಸ್ಥಿತಿ.

ಅಲುಗಾಡದಂತೆ ಕುಳಿತುಕೊಂಡು, ಕಣ್ಣಗಲ ಮಾಡಿಕೊಂಡು ಎಲ್ಲ ಒಮ್ಮೆ ಸರಿಯಾಗಿ ನೋಡಿದೆ. ಸಾಯುವ ಸ್ವಲ್ಪ ಸಮಯಕ್ಕೆ ಮೊದಲು ಮೇಲಿನ ಉಸಿರು ಮೇಲೆ, ಕೆಳಗಿನ ಉಸಿರು ಕೆಳಗೆ ಆಗುತ್ತದಲ್ಲ ಹಂಗಾಗಿಬಿಟ್ಟಿತು ನನ್ನ ಪರಿಸ್ಥಿತಿ. ಮೈಗೆಲ್ಲ ಬಂಡೆಣ್ಣೆ ಬಳಿದುಕೊಂಡಿದ್ದ ಅವರು ಕೇವಲ ನಿಕ್ಕರು ಧರಿಸಿಕೊಂಡಿದ್ದರು. ಎಲ್ಲ ದಷ್ಟಪುಷ್ಟ ಕಾಯದವರೇ. ಹೊತ್ತುಕೊಂಡಿದ್ದ ಎಲ್ಲ